# ಕರ್ನಾಟಕ ಸರ್ಕಾರ
## ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ) ಮೌಲ್ಯವರ್ಧಿತ ತೆರಿಗೆ ವಿಭಾಗ-4, 4ನೇ ಮಹಡಿ
'ಎ' ಬ್ಲಾಕ್, ವಾಣಿಜ್ಯ ತೆರಿಗೆ ಕಾರ್ಯಾಲಯ-2 ಕೋರಮಂಗಲ, ಬೆಂಗಳೂರು-47.

ಸಂಖ್ಯೆ: ವಾತೆಜಂಆ(ಆ)/ಮೌತೆವಿ-4/ಸಿ.ಆರ್.            /2015-16 ದಿನಾಂಕ: 26.02.2016.

### ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ಸಾರ್ವಜನಿಕ ಗಮನಕ್ಕೆ ತರಬಯಸುವುದೇನೆಂದರೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),ಮೌಲ್ಯವರ್ಧಿತ ತೆರಿಗೆ ವಿಭಾಗ-4 ವಾಣಿಜ್ಯ ತೆರಿಗೆ ಕಾರ್ಯಾಲಯ-2, ಕೋರಮಂಗಲ, ಬೆಂಗಳೂರು-47 ಈ ಕಛೇರಿಯಲ್ಲಿರುವ ಈ ಕೆಳಕಂಡ ಹಳೇ ವಾಹನಗಳ ಹರಾಜನ್ನು ಹೇಗಿದೆಯೋ ಹಾಗಿನ ಸ್ಥಿತಿಯಲ್ಲಿ ದಿನಾಂಕ:19.03.2014ರಂದು ಮಧ್ಯಾಹ್ನ 2.30 ಗಂಟೆಗೆ ಹರಾಜು ಮಾಡಲಾಗುತ್ತದೆ. ಆಸಕ್ತಿಯುಳ್ಳ ವ್ಯಕ್ತಿಗಳು ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30ರ ಒಳಗೆ ವಾಹನಗಳನ್ನು ಖುದ್ದಾಗಿ ಪರಿಶೀಲಿಸಬಹುದು. ಈ ಹರಾಜಿನಲ್ಲಿ ಪಾಲ್ಗೊಳ್ಳಬಯಸುವವರು ದಿನಾಂಕ:15.03.2016ರಂದು ಯಾವ ವಾಹನದ ಸಂಬಂಧ ಪಾಲ್ಗೊಳ್ಳುವವರು ಸದರಿ ವಾಹನದ ನಿಗದಿಪಡಿಸಿದ ಕನಿಷ್ಟ ಹರಾಜಿನಲ್ಲಿ ಮೌಲ್ಯದ ಶೇ.10ರಷ್ಟು ಠೇವಣಿ ಹಣ ಸಂದಾಯ ಮಾಡಿ ರಶೀದಿಯನ್ನು ಪಡೆಯಬಹುದು. ವಿವರಗಳಿಗೆ ಇಲಾಖಾ ವೆಬ್ ಸೈಟ್ http://ctax.kar.nic.in ನ್ನು ನೋಡಬಹುದು. ಹರಾಜಿನಲ್ಲಿರುವ ವಾಹನಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಾಹನದ ಹೆಸರು | ವಾಹನ ಸಂಖ್ಯೆ | ತಯಾರಿಕೆಯ ವರ್ಷ | ಇಂಧನ | ಹರಾಜು ಮಾಡಲು ನಿಗದಿಪಡಿಸಿದ ಮೊತ್ತ |
|---|---|---|---|---|---|
| 1 | ಟಾಟಾ ಸುಮೋ | ಕೆಎ 01 ಜಿ 3404 | 1999 | ಡೀಸೆಲ್ | 38000/- |
| 2 | ಟಾಟಾ ಸುಮೋ | ಕೆಎ 01 ಜಿ 3035 | 1997 | ಡೀಸೆಲ್ | 34000/- |

ಸಹಿ/-
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ)
ಮೌಲ್ಯವರ್ಧಿತ ತೆರಿಗೆ ವಿಭಾಗ-4, ಬೆಂಗಳೂರು.

ಸಂ.ವಾತೆಜಂಆ(ಆ)4/ಮೌತೆವಿ-4/
2015-16

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ)
ಮೌಲ್ಯವರ್ಧಿತ ತೆರಿಗೆ ವಿಭಾಗ-4,
ವಾಣಿಜ್ಯ ತೆರಿಗೆಗಳ ಕಾರ್ಯಲಯ-2,
ಕೋರಮಂಗಲ, ಬೆಂಗಳೂರು. ದಿನಾಂಕ: 26.02.2016

## ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ವಿಷಯ: ಈ ವಿಭಾಗದಲ್ಲಿರುವ ನಿರುಪಯುಕ್ತ ಸರ್ಕಾರಿ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ (ಕೇಂದ್ರ), ಕೋರಮಂಗಲ, ಬೆಂಗಳೂರು ಇವರ ತಪಾಸಣಾ ವರದಿ ದಿನಾಂಕ: 20.10.2015.
2) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ) ಇವರ ಪತ್ರ ಸಂಖ್ಯೆ: ವಿ.ಹೆಚ್.ಟಿ/ಸಿ.ಆರ್-07/13-14 ದಿನಾಂಕ: 12.02.2016.

********

ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ತಿಳಿಸುವುದೇನೆಂದರೆ, ಉಲ್ಲೇಖ(1) ಮತ್ತು (2)ರ ಆದೇಶದಂತೆ ದಿನಾಂಕ: 19.03.2015ರಂದು ಮಧ್ಯಾಹ್ನ 2.30 ಗಂಟೆಗೆ ಈ ಕಛೇರಿಯ ಕೆಳಕಂಡ ವಾಹನಗಳು ನಿರುಪಯುಕ್ತವಾಗಿರುವ ಕಾರಣ ಸಂಬಂಧಿಸಿದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಒ-4 ಇವರಿಂದ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಬಹಿರಂಗ ಹರಾಜು ದಿನಾಂಕ | ಹರಾಜು ಮಾಡುವ ಸ್ಥಳ |
|---|---|
| 19.03.2016 | ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ),<br>ಮೌಲ್ಯವರ್ಧಿತ ತೆರಿಗೆ ವಿಭಾಗ,<br>ವಾಣಿಜ್ಯ ತೆರಿಗೆ ಕಾರ್ಯಾಲಯ-2,<br>ಕೋರಮಂಗಲ, ಬೆಂಗಳೂರು-560047. |

| ಕ್ರ.ಸಂ. | ವಾಹನದ ಹೆಸರು | ವಾಹನ ಸಂಖ್ಯೆ | ತಯಾರಿಕೆಯ ವರ್ಷ | ಇಂಧನ | ಹರಾಜು ಮಾಡಲು ನಿಗಧಿಪಡಿಸಿದ ಕನಿಷ್ಠಮೊತ್ತ |
|---|---|---|---|---|---|
| 1 | ಟಾಟಾ ಸುಮೋ | ಕೆಎ 01ಜಿ 3404 | 1997 | ಡೀಸೆಲ್ | 38000/- |
| 2 | ಟಾಟಾ ಸುಮೋ | ಕೆಎ 01ಜಿ 3035 | 1997 | ಡೀಸೆಲ್ | 34000/- |

ನಿಬಂಧನೆಗಳು:

1. ಮೇಲೆ ತಿಳಿಸಿರುವ ನಿರುಪಯುಕ್ತ ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ಕೋರಮಂಗಲ, ಬೆಂಗಳೂರು ಇವರ ಸಮ್ಮುಖದಲ್ಲಿ ಅಥವಾ ಅವರು ನೇಮಿಸಿದ್ದ ಅಧಿಕಾರಿಗಳು ಸಮ್ಮುಖದಲ್ಲಿ ನಡೆಸಲಾಗುವುದು.

2. ವಾಹನಗಳನ್ನು ಎಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ನಡೆಸಲಾಗುವುದು.

3. ಹರಾಜಿನಲ್ಲಿ ಪಾಲ್ಗೊಳ್ಳಬಯಸುವವರು ದಿನಾಂಕ:15.03.2016ರಂದು ಯಾವ ವಾಹನದ ಸಂಬಂಧ ಹರಾಜಿನಲ್ಲಿ ಪಾಲ್ಗೊಳ್ಳುವವರು ಸದರಿ ವಾಹನದ ಹರಾಜು ಮಾಡಲು ನಿಗದಿಪಡಿಸಿದ ಕನಿಷ್ಟ ಮೌಲ್ಯದ ಶೇ.10ರಷ್ಟು ಹಣವನ್ನು ಠೇವಣಿ ಮಾಡಿ ರಶೀದಿ ಪಡೆಯತಕ್ಕದ್ದು.

4. ವಾಹನವನ್ನು ಸಂಬಂಧಿಸಿದ ಅಧಿಕಾರಿಯವರಿಂದ ಅನುಮೋದನೆ ಸಿಕ್ಕನಂತರ 15 ದಿನಗಳೊಳಗಾಗಿ ಪೂರ್ತಿ ಹಣವನ್ನು ಪಾವತಿ ಮಾಡಿ ನಂತರ ಸ್ವಂತ ಖರ್ಚಿನಲ್ಲಿ ಯಥಾಸ್ಥಿತಿಯಲ್ಲಿ ಹಾಲಿಯಿರುವ ಜಾಗದಿಂದ ಸಾಗಿಸಿಕೊಳ್ಳತಕ್ಕದ್ದು.

5. ವಾಹನವನ್ನು ಪರೀಕ್ಷಿಸಲು ಈ ಕಛೇರಿಯಲ್ಲಿ ಕೆಲಸದ ದಿನಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಪರಿಶೀಲಿಸಬಹುದು.

6. ಹರಾಜಿನಲ್ಲಿ ಹಣ ಕಟ್ಟಿ ಯಶಸ್ವಿಯಾಗದವರಿಗೆ ಕಟ್ಟಿದ ಹಣವನ್ನು ಕೂಡಲೇ ಹಿಂತಿರುಗಿಸಲಾಗುವುದು.

7. ಬಹಿರಂಗ ಹರಾಜು ಮುಗಿದ ಮೇಲೆ ಅತಿ ಹೆಚ್ಚು ಬಿಡ್ಡುದಾರರು ಕೂಡಲೇ ಮಾರಾಟದ ಮೊತ್ತ ಹಾಗೂ ತೆರಿಗೆಗಳು ಸೇರಿದಂತೆ ಶೇ.25 ಭಾಗ ಹಣವನ್ನು ಪಾವತಿಮಾಡದೇ ಹೋದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

8. ಉಳಿದ ಶೇ.75 ಭಾಗ ಹರಾಜಿನ ಹಣವನ್ನು ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರಿಂದ ಒಪ್ಪಿಗೆ ಪತ್ರ ದೊರೆತ ದಿನಾಂಕದಿಂದ 15 ದಿನಗಳೊಳಗಾಗಿ ಪಾವತಿಸಿ ನಂತರ ತಮ್ಮ ಸ್ವಂತ ಖರ್ಚಿನಲ್ಲಿ ವಾಹನವನ್ನು ಹಾಲಿ ಇರುವ ಜಾಗದಿಂದ ಯಥಾ ಸ್ಥಿತಿಯಲ್ಲಿ ಸಾಗಿಸಿ ಕೊಳ್ಳತಕ್ಕದ್ದು.

9. ಹರಾಜಿನಲ್ಲಿ ವಿಲೇವಾರಿಯಾದ ವಾಹನವನ್ನು ನಿಗದಿತ ಅವಧಿಯೊಳಗೆ ಪೂರ್ತಿ ಹಣಕಟ್ಟಿ ಸ್ವಾಧೀನಕ್ಕೆ ತೆಗೆದುಕೊಳ್ಳದೆ ಹೋದ ಪಕ್ಷದಲ್ಲಿ ಪ್ರತಿ ದಿನಕ್ಕೆ ರೂ.50-00 ನೆಲ ಬಾಡಿಗೆ ವಿಧಿಸಲಾಗುವುದು ಮತ್ತು ತಿಂಗಳ ಒಳಗಾಗಿ ಪೂರ್ತಿ ಹಣ ಕಟ್ಟದಿದ್ದರೆ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

10. ಇಲಾಖಾ ಸಿಬ್ಬಂದಿಯವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ.

11. ಬಹಿರಂಗ ಹರಾಜಿನಲ್ಲಿ ವಾದ ವಿವಾದಗಳಿಗೆ ಅವಕಾಶವಿಲ್ಲ. ಯಾವುದೇ ತಕರಾರುಗಳಿಗೆ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಕೋರಮಂಗಲ, ಬೆಂಗಳೂರು ಇವರ ತೀರ್ಮಾನವೇ ಅಂತಿಮವಾದುದು.

12. ಯಾವುದೇ ಸಂದರ್ಭದಲ್ಲಿಯೂ ಮಾರಾಟದ ಹರಾಜನ್ನು ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ ಎಲ್ಲಾ ಅಧಿಕಾರ ವಾಣಿಜ್ಯ ಜಂಟಿ ಆಯುಕ್ತರು (ಆಡಳಿತ),ಡಿ.ವಿ.ಒ-4 ಕೋರಮಂಗಲ, ಬೆಂಗಳೂರು ಇವರಿಗೆ ಸಂಬಂಧಪಟ್ಟಿರುತ್ತದೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ),
ಮೌಲ್ಯವರ್ಧಿತ ತೆರಿಗೆ ವಿಭಾಗ-4, ಬೆಂಗಳೂರು.

ಪ್ರತಿಗಳು:

1. ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಒ-1,2,3,5 ಮತ್ತು 6 (ಜಾಗೃತಿ) ಬೆಂಗಳೂರು ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
3. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಕೇಂದ್ರ) ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕಕ್ಕೆ.
5. ಇಲಾಖಾ ವೆಬ್‌ಸೈಟ್‌ನಲ್ಲಿ ಸದರಿ ಪತ್ರವನ್ನು ಹಾಕಲು, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಗಣಕ ಕೇಂದ್ರ, ಬೆಂಗಳೂರು ಇವರಿಗೆ ಕಳುಹಿಸಲಾಗಿದೆ.
6. ಕಛೇರಿ ಕಡತಕ್ಕೆ.